ದೊರೆಸ್ವಾಮಿ ಅಯ್ಯಂಗಾರರು ಅತಿಸರಳರು, ಶಾಂತಚಿತ್ತರು. ವಿದ್ಯೆಯ ಪಕ್ವತೆ ಕಣ್ಣ ಮಿಂಚಲ್ಲಿ ಸೌಮ್ಯವಾಗಿ ಮಿನುಗುತ್ತಿತ್ತು. ಮುಖದ ತುಂಬಾ ಪ್ರಶಾಂತ ದಿವ್ಯ ಮಂದಸ್ಮಿತ.

ಅವರು ನಿಧನರಾಗುವ ಕೆಲವು ತಿಂಗಳುಗಳ ಮುನ್ನ ಒಂದು ವೀಣಾ ಕಛೇರಿ. ವೇಳೆಗೆ ಸರಿಯಾಗಿ ಆಗಮಿಸಿದರು. ಮನೆಗೆ ಸಮೀಪದಲ್ಲೇ ಕಛೇರಿ ನಡೆಯುವ ಸ್ಥಳ ಇದ್ದುದರಿಂದ ಕಾಲ್ನಡಿಗೆಯಲ್ಲೇ ಧಾವಿಸಿ ಬಂದಿದ್ದಾರೆ. ಸಾಧಾರಣ ಕಚ್ಚೆ ಪಂಚೆ, ಚಳಿಗೊಂದು ಕೋಟು! ವಯೋಮಾನ ಮತ್ತು ಅನಾರೋಗ್ಯದ ಕಾರಣ ಆಯಾಸಗೊಂಡಿದ್ದಾರೆ. ಆದರೂ ಇದು ಗುರುಪುತ್ರನ ಕಾರ್ಯಕ್ರಮ. ತಪ್ಪಿಸಲಾಗದು. ಅಷ್ಟು ಹೊತ್ತಿಗಾಗಲೇ ಸಭೆ ತುಂಬಿತ್ತು. ಒಂದು ಕುರ್ಚಿಯೂ ಖಾಲಿ ಇಲ್ಲ. ನೇರವಾಗಿ ವೇದಿಕೆಯ ಸಮೀಪ ಬಂದು ಅಲ್ಲೇ ಕಂಬಕ್ಕೆ ಒರಗಿ ನೆಲದ ಮೇಲೆ ಪದ್ಮಾಸನ ಹಾಕಿ ಕೂತುಬಿಟ್ಟರು. ವ್ಯವಸ್ಥಾಪಕರು ಗಾಬರಿಯಿಂದ ಓಡೋಡಿ ಬಂದರು. ಆಸನದಲ್ಲಿ ಕುಳಿತುಕೊಳ್ಳಬೇಕೆಂದು ವಿನಂತಿಸಿದರು. ಅಯ್ಯಂಗಾರರು ನಗುನಗುತ್ತಾ ‘ಇಲ್ಲೇ ಆರಾಮವಾಗಿದೆ’ ಎಂದರು. ಅಲ್ಲೇ ಕೂತು ಪೂರ್ತಿ ಕಛೇರಿ ಕೇಳಿದರು. ಕಡೆಯಲ್ಲಿ ಎದ್ದುಬಂದು ಹೃತ್ಪೂರ್ವಕವಾಗಿ ಆ ವೈಣಿಕನನ್ನು ಅಭಿನಂದಿಸಿದರು. ಹೀಗಿತ್ತು ಗುರುಗಳ ಸರಳತೆ




## ಹೊಟ್ಟೆಕಿಚ್ಚು ಪಡಬಾರದು

ಜೀವನದ ಕಡೆಯ ದಿನಗಳಲ್ಲಿ ಈ ಹಿರಿಯರು ಪಕ್ವ ಫಲದಂತೆ ಮಾಗಿದ್ದರು. ಆದರೆ ಮಗು ಮುಗ್ಧತೆಯನ್ನು ಉಳಿಸಿಕೊಂಡಿದ್ದರು. ಮಾತಾಡುವಾಗಿನ ಅವರ ಚಹರೆಗಳಲ್ಲಿ ಮುಗ್ಧತೆ ಪ್ರಕಟವಾಗುತ್ತಿತ್ತು. ಮಾತಿನ ನಡುವೊಮ್ಮೆ ಅವರು ಅಸೂಯೆಯ ಬಗ್ಗೆ ಹೇಳಿದ್ದು: “ನಾವು ಬೇರೆಯವರ ಬಗ್ಗೆ ಹೊಟ್ಟೆಕಿಚ್ಚು ಪಡಲೇಬಾರದು ಕಣಮ್ಮ. ಯಾಕೆ ಗೊತ್ತೇ? ದೇವರು ನಮ್ಮನ್ನು ಕೇಳ್ತಾನೆ: ‘ಏನಯ್ಯಾ ನೀನು ಮಾತ್ರ ನನ್ನ ಮಗನೋ? ಅವನೇನು ಅಲ್ಲವೋ? ಅವನನ್ನು ನಾನು ಮೇಲೆ ತರಬಾರದೋ?.’ ದೇವರಿಗೆ ಉತ್ತರ ಕೊಡಬೇಕಲ್ಲವೇ ನಾವು!”

ದೊರೆಸ್ವಾಮಿ ಅಯ್ಯಂಗಾರರ ಬದುಕಿನಯಾನದ ಕೃತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಕವಿ ಪು.ತಿ. ನರಸಿಂಹಾಚಾರ್ ಹೀಗೆ ಹೇಳಿದ್ದಾರೆ: “ಪ್ರಸನ್ನವೂ ರಮಣೀಯವೂ ಆದ ಸನ್ಮನುಷ್ಯನ ಮನಸ್ಸಿನಂತೆ ಇದೆ ಅವರ ಜೀವನ ಕಥನ. ಉದ್ದಕ್ಕೂ ದೊರೆಸ್ವಾಮಿ ಅಯ್ಯಂಗಾರ್ ಅವರ ಮಧುರ ಧ್ವನಿ ಕೇಳಬರುತ್ತಾ, ಓದಿಸಿ ಕೇಳಿದ ನನಗೆ ಒಬ್ಬ ಶುದ್ಧಾತ್ಮನ ಚೈತನ್ಯ ರಸ ನನ್ನೊಳಗೆ ಪ್ರವೇಶಿಸುವಂತೆ ತೋರಿ, ನನ್ನನ್ನು ತೇಜಗೊಳಿಸುತ್ತಿತ್ತು.”

ಈ ‘ಸಂಗೀತ ಕಲಾನಿಧಿ’ಯ ಆತ್ಮಕಥನದ ಬಗ್ಗೆ ಎಲ್ಲ ಸಹೃದಯರ ಅಭಿಪ್ರಾಯವೂ ಇದೇ ಆಗಿದೆ. ಜೀವನದಂತೆ ಮಾತು. ಮಾತಿನಂತೆ ವೀಣೆ. ಇದವರ ಜೀವನಧರ್ಮ. ಒಟ್ಟಾರೆ ಹೇಳಬೇಕೆಂದರೆ, ಈ ಪೂಜ್ಯರ ಜೀವನ ಸರಳ ಸುಂದರ ಹೇಗೋ ಹಾಗೆಯೇ ಪ್ರಬುದ್ಧ ಮತ್ತು ಪಾರದರ್ಶಕ. ಅವರ ಮಾತುಗಳನ್ನು ಕೇಳಿದ ಮೇಲೆ ಒಂದು ಪ್ರಶಾಂತತೆಯ ಆನಂದ ಹೃದಯದಲ್ಲಿ ಅನುಭವವಾಗುತ್ತದೆ. ಅವರು ಹೊಮ್ಮಿಸುತ್ತಿದ್ದ ಆರ್ದ್ರ ವೀಣಾನಾದದ ಪರಿಣಾಮವೂ ಅದೇ ತಾನೇ?

## ಎಲ್ಲೆಡೆ ‘ವೀಣೆಯ ನೆರಳಿನಲ್ಲಿ’

ಈ ‘ವೈಣಿಕ ಶಿಖಾಮಣಿ’ಯ ಆತ್ಮವೃತ್ತಾಂತ ಮೊತ್ತಮೊದಲು ‘ಸುಧಾ’ದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ನಂತರ ‘ವೀಣೆಯ ನೆರಳಿನಲ್ಲಿ’ ಶೀರ್ಷಿಕೆಯಲ್ಲಿ ಪುಸ್ತಕರೂಪವಾಯಿತು. 1997ರಲ್ಲಿ ‘ಗೀತಾ ಬುಕ್ ಹೌಸ್’ ಪ್ರಥಮ ಮುದ್ರಣವನ್ನು ಹೊರತಂದರೆ, 2014ರಲ್ಲಿ ‘ಹೇಮಂತ ಸಾಹಿತ್ಯ’ ದ್ವಿತೀಯ ಮುದ್ರಣವನ್ನು ಪ್ರಕಟಿಸಿತು. ಕಳೆದ ವರ್ಷ ಬೆಂಗಳೂರು ಆಕಾಶವಾಣಿಯು ‘ವೀಣೆಯ ನೆರಳಿನಲ್ಲಿ’ ಕೃತಿಯನ್ನು ಧಾರಾವಾಹಿಯಾಗಿ ಪ್ರಸಾರ ಮಾಡಿ ಕನ್ನಡಿಗರ ಮನೆಮನಗಳಿಗೆ ತಲುಪಿಸಿದೆ.

‘ವೀಣೆಯ ನೆರಳಿನಲ್ಲಿ’ ಇದೀಗ ‘ವೀಣಾ ಕಿ ಛಾಯಾ ಮೆ’ ಹೆಸರಿನಲ್ಲಿ ಹಿಂದಿಗೆ ಅನುವಾದಗೊಂಡಿದೆ. ದೆಹಲಿಯ ‘ಸಂಗೀತ ನಾಟಕ ಅಕಾಡೆಮಿ’ ಅನುವಾದವನ್ನು ಹೊರತಂದಿದೆ. ಸ್ವತಃ ದೊರೆಸ್ವಾಮಿ ಅಯ್ಯಂಗಾರರ ತಂಗಿ ಪ್ರೊ. ಎಸ್. ವಿ. ಲೀಲಾವತಿ ಅವರು ಹಿಂದಿ ಅನುವಾದದ ಕರ್ತೃ.

ಕನ್ನಡನಾಡಿನ ಒಬ್ಬ ಗಣ್ಯ ವಿದ್ವಾಂಸರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ (ಜನನ: 11.8.1920) ಅವರ ಜೀವನಕಥನ ರಾಷ್ಟ್ರಮಟ್ಟದಲ್ಲಿ ಸಹೃದಯರಿಗೆ ಲಭ್ಯವಾಗಿರುವುದು ಅವರ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ತಂದಿದೆ.

ಪ್ರತಿಕ್ರಿಯಿಸಿ: feedback@sudha.co.in


